**ಓ.ಎಸ್. ನಂ. 82/2020** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 8.8.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಎನ್.ಹೆಚ್.ಎಂ ವಕೀಲರಿಂದಃ**

ದಾವಆಸ್ತಿಯು ನನಗೆ ಸೇರಿರುತ್ತದೆ ಎಂದು ಈ ದಾವೆಯನ್ನು ಹಾಕಿರುತ್ತೇನೆ. 3 ರಿಂದ 5 ನೇ ಪ್ರತಿವಾದಿಯರನ್ನು ಈ ದಾವೆಯಲ್ಲಿ ಏಕೆ ಸೇರಿಸಿರುತ್ತೀರಿ ಎಂದರೆ ಸಾಕ್ಷಿದಾರರು ಅವರು ನನಗೆ ಸಂಬಂಧಪಟ್ಟ ನಿವೇಶನ ನನ್ನದಾಗಿರುವುದಿಲ್ಲ ಎಂದು ಗಲಾಟೆ ಮಾಡಿದ್ದರಿಂದ ಅವರನ್ನು ಪಕ್ಷಗಾರರಾಗಿ ಮಾಡಿರುತ್ತೇನೆ ಎನ್ನುವರು. ಅವರು ಗಲಾಟೆ ಮಾಡಿರುವ ಬಗ್ಗೆ ಠಾಣೆಗೆ ದೂರನ್ನು ನೀಡಿರುತ್ತೇನೆ. ದಾವಆಸ್ತಿಯು ಮೂಲತಃ ಬ್ರಹ್ಮದೇವಯ್ಯ ರವರಿಗೆ ಸೇರಿತ್ತು. ನಂತರ ಸದರಿ ಬ್ರಹ್ಮದೇವಯ್ಯ ರವರು ತನ್ನ ಮಗ ಜಗದೀಶನಿಗೆ 10 ಗುಂಟೆ ಜಮೀನನ್ನು ದಾನಪತ್ರ ಮಾಡಿರುತ್ತಾರೆ. ಸದರಿ ಜಗದೀಶ ಎಂಬುವವರು ಸತೀಶಕುಮಾರ್ ಎಂಬುವವರಿಗೆ 2010 ರಲ್ಲಿ ಜಿ.ಪಿ.ಎ ಅನ್ನು ಬರೆದುಕೊಟ್ಟಿರುತ್ತಾರೆ. ಸದರಿ ಸತೀಶಕುಮಾರ್ ರವರು ಅರುಣ್‌ಗೌಡ ಎಂಬುವವರಿಗೆ 10 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಈ ದಾವೆಯನ್ನು ಹೊರತುಪಡಿಸಿ ದಾವಆಸ್ತಿಯ ಮೇಲೆ 5 ವರ್ಷದ ಹಿಂದೆ ವಕೀಲರೊಬ್ಬರಿಗೆ ದಾವೆ ಹಾಕಲು ಹೇಳಿದ್ದು, ಆದರೆ ಯಾವುದೇ ದಾವೆಯನ್ನು ಹಾಕಿರುವುದಿಲ್ಲ. ನಾನು ಹೆಚ್.ಡಿ.ಕೋಟೆಯ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್ 148/2020 ರಂತೆ ಶಾಶ್ವತ ನಿರ್ಬಂದಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯಲ್ಲಿ ತಾತ್ಕಾಲಿಕ ನಿರ್ಬಂದಕಾಜ್ಞೆ ಕೋರಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮಧ್ಯಂತರ ಅರ್ಜಿ ಏನಾಗಿರುತ್ತದೆ ಎಂದರೆ ಸಾಕ್ಷಿದಾರರು ದಾವೆ ಬೇಡ ಎಂದು ವಕೀಲರಿಗೆ ಹೇಳಿರುತ್ತೇನೆ ಎನ್ನುವರು. ಸದರಿ ಮಧ್ಯಂತರ ಅರ್ಜಿ ವಜಾ ಆಗಿದ್ದರಿಂದ ಅದನ್ನು ಮರೆಮಾಚಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೂಲ ಸರ್ವೆ ನಂ.18 ರಲ್ಲಿ ಅರುಣಗೌಡ ಎಂಬುವವರಿಂದ ವೆಂಕಟೇಶ ಎಂಬುವವರು 40*96 ಅಡಿ ಆಸ್ತಿಯನ್ನು ನನ್ನ ಆಸ್ತಿಯ ಪಕ್ಕದಲ್ಲಿ ಖರೀದಿ ಮಾಡಿರುತ್ತಾರೆ. ಸದರಿ ವೆಂಕಟೇಶ್ ಎಂಬುವವರು ಶಾಶ್ವತ ನಿರ್ಬಂದಕಾಜ್ಞೆ ಕೋರಿ ಓ.ಎಸ್ 152/2020 ರಂತೆ ದಾವೆ ಹಾಕಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ಆಗಿರುವ ಮಧ್ಯಂತರ ಅರ್ಜಿಯ ಆದೇಶದ ವಿರುದ್ದ ಸದರಿ ವೆಂಕಟೇಶ್ ಎಂ.ಎ 23/2020 ರಂತೆ ಇದೇ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮೇಲ್ಮನವಿ ಸಹ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯನ್ನು ಸೇರಿಸಿ ಈ ಹಿಂದೆ ಅರುಣಗೌಡ ಎಂಬುವವರು ಓ.ಎಸ್ 223/2019 ರಂತೆ ಶಾಶ್ವತ ನಿರ್ಬಂದಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿ ತಾತ್ಕಾಲಿಕ ನಿರ್ಬಂದಕಾಜ್ಞೆ ಕೋರಿದ್ದು, ಅದು ಸಹ ವಜಾ ಆಗಿರುತ್ತದೆ ಎಂದರೆ

ನನಗೆ ಗೊತ್ತಿರುವುದಿಲ್ಲ. ಸದರಿ ಆದೇಶದ ವಿರುದ್ಧ ಅರುಣಗೌಡ ಎಂಬುವವರು ಎಂ.ಎ 9/2020 ರಂತೆ ಮೇಲ್ಮನವಿ ಸಲ್ಲಿಸಿದ್ದು, ಅದು ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನಾನು 2019 ರಲ್ಲಿ ಅರುಣ್‌ಗೌಡ ರವರಿಂದ ದಾವಆಸ್ತಿಯನ್ನು ಖರೀದಿಸಿರುತ್ತೇನೆ. ದಾವಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಆಸ್ತಿಗೆ ಸಂಬಂಧಿಸಿದಂತೆ ಯಾವ ದಾವೆ ನಡೆದಿರುತ್ತದೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿದಾರರು ಮಾನ್ಯ ಉಚ್ಚ ನ್ಯಾಯಾಲಯವು ಆಸ್ತಿಯನ್ನು ಖರೀದಿಸಬಹುದು ಎಂದು ಆದೇಶ ನೀಡಿತ್ತು ಎನ್ನುವರು. ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಯಾರು ಅರ್ಜಿ ಸಲ್ಲಿಸಿರುತ್ತಾರೆ ಎಂದು ಮತ್ತು ಅದರ ಅರ್ಜಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯ ಮೂಲ ಸರ್ವೆ ನಂಬರ್ 18 ನ್ನು 1974 ರಲ್ಲಿ ಬ್ರಹ್ಮದೇವಯ್ಯ ರವರು ಭೂಪರಿವರ್ತನೆ ಮಾಡಿಸಿ ಅವರ ಮಗ ಜಗದೀಶ ಎಂಬುವವರಿಗೆ ದಾನಪತ್ರ ಮಾಡಿರುತ್ತಾರೆ. ನಾನು ದಾವಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಬ್ರಹ್ಮದೇವಯ್ಯ ರವರ ಹೆಸರಿಗೆ ಆದ ಕ್ರಯಪತ್ರ, ಜಗದೀಶ ರವರ ಹೆಸರಿಗೆ ಆಗಿರುವ ದಾನಪತ್ರ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ನೋಡಿರುತ್ತೇನೆ. ಸದರಿ ಮಾನ್ಯ ಉಚ್ಚನ್ಯಾಯಾಲಯದ ಆದೇಶವನ್ನು ನೋಡಿರುತ್ತೀರಾ ಎಂದರೆ ಸಾಕ್ಷಿದಾರರು ನನ್ನ ವಕೀಲರಿಗೆ ಸದರಿ ಆದೇಶವನ್ನು ತೋರಿಸಿರುತ್ತೇನೆ, ಅವರು ಆಸ್ತಿಯನ್ನು ಖರೀದಿಸಬಹುದು ಎಂದು ಹೇಳಿರುತ್ತಾರೆ ಎನ್ನುವರು. ದಾವಆಸ್ತಿಗೆ ಸಂಬಂಧಿಸಿದಂತೆ ಈ ಹಿಂದೆ ಅರುಣಗೌಡ ರವರು ಹಲವಾರು ದಾವೆಗಳನ್ನು ಎದುರಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನಾನು ಲಿಖಿತವಾಗಿ ಕಾನೂನು ಮಾಹಿತಿಯನ್ನು ವಕೀಲರಿಂದ ಪಡೆದುಕೊಂಡಿರುವುದಿಲ್ಲ. ಸರ್ವೆ ನಂ.18 ಭೂಪರಿವರ್ತನೆಯಾದ ನಂತರ ಯಾರ ಹೆಸರಿಗೆ ಯಾವ ದಾಖಲೆಯಾಗಿರುತ್ತದೆ ಮತ್ತು ಖಾತೆಯಾಗಿರುತ್ತದೆ ಎಂದರೆ ತಿಳಿದುಕೊಂಡಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ನಿವೇಶನ ಸಂಖ್ಯೆ 409 ನನಗೆ ಸಂಬಂಧಿಸಿರುತ್ತದೆ ಎನ್ನುವರು. 5 ನೇ ಪ್ರತಿವಾದಿಯನ್ನು ಏಕೆ ಪಕ್ಷಗಾರನಾಗಿ ಮಾಡಿರುತ್ತೀರಿ ಎಂದರೆ ಸಾಕ್ಷಿದಾರರು ದಾವಆಸ್ತಿಯ ಮೇಲೆ ಸಾಲ ಇರುತ್ತದೆ ಎಂದು ನನ್ನನ್ನು ತಡೆದಿದ್ದರಿಂದ ಅವರನ್ನು ಪಕ್ಷಗಾರನಾಗಿ ಮಾಡಿರುತ್ತೇನೆ ಎನ್ನುವರು. ಸದರಿ ಆಸ್ತಿಯ ಮೇಲೆ 5 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಸಾಲ ನೀಡಿದ್ದರು. ಎಷ್ಟು ಸಾಲ ನೀಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. 5 ನೇ ಪ್ರತಿವಾದಿಯು ನನಗೆ ಯಾವುದೇ ನೋಟಿಸ್ ಅಥವಾ ದಾಖಲೆಯನ್ನು ನೀಡಿರುವುದಿಲ್ಲ. ನಾನು 5 ನೇ ಪ್ರತಿವಾದಿಗೆ ಅರ್ಜಿ ನೀಡಿ ಯಾರು ಎಷ್ಟು ಸಾಲ ಪಡೆದಿರುತ್ತಾರೆ ಎಂದು ಮಾಹಿತಿಯನ್ನು ಕೇಳಿರುವುದಿಲ್ಲ. ಆ ರೀತಿ ಮಾಹಿತಿ ಪಡೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಸಾಲಕ್ಕೂ ನನಗೂ ಸಂಬಂಧ ಇರುವುದಿಲ್ಲ, ಆ ಕಾರಣ ಕೇಳಿರುವುದಿಲ್ಲ ಎನ್ನುವರು. ಬ್ಯಾಂಕಿನವರು ಸಾಲ ನೀಡುವ ಪೂರ್ವದಲ್ಲಿ ಎಲ್ಲ ದಾಖಲೆಯನ್ನು ಪರಿಶೀಲಿಸಿ, ಕಾನೂನು ಅಭಿಪ್ರಾಯವನ್ನು ಪಡೆದು ನಂತರ ಸ್ಥಳ ಪರಿಶೀಲನೆ ಮಾಡಿ ಸಾಲ ನೀಡುತ್ತಾರೆ ಎಂದರೆ ಸಾಕ್ಷಿದಾರರು ಸದರಿ ಸಾಲಕ್ಕೂ ದಾವಆಸ್ತಿಗೂ ಯಾವುದೇ ಸಂಬಂಧ ಇರುವುದಿಲ್ಲ ಎನ್ನುವರು.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.